**ದಿನಾಂಕ: 27.09.2022**

# ಕಲಿಕಾ ಚೇತರಿಕೆ- FAQ

**01) ಶಿಕ್ಷಕರು ವಾರ್ಷಿಕ ಕ್ರಿಯಾಯೋಜನೆ ಹಾಗೂ ಪಾಠಯೋಜನೆಯನ್ನು ಬರೆಯಬೇಕೇ? ಇದಕ್ಕಾಗಿ ನಿಗದಿತ ನಮೂನೆಯಿದ್ದಲ್ಲಿ ತಿಳಿಸಿ.**

ಕಲಿಕಾ ಹಾಳೆಗಳನ್ನು ಆಧರಿಸಿ ವಾರ್ಷಿಕ ಕ್ರಿಯಾಯೋಜನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕಲಿಕಾ ಹಾಳೆಗಳನ್ನು (5-ಇ) ತತ್ವದ ರೀತಿಯ ರೂಪಿಸಿರುವುದರಿಂದ ಶಿಕ್ಷಕರು ಪಾಠ ಯೋಜನೆಯನ್ನು ಪೂರ್ವಸಿದ್ಧತೆಯ ಭಾಗವಾಗಿ ಅತ್ಯಂತ ಸರಳವಾಗಿ ಮಾಡಿಕೊಳ್ಳಲು ಈಗಾಗಲೇ ತರಬೇತಿಯಲ್ಲಿ ತಿಳಿಸಿದೆ. ಪಾಠ ಯೋಜನೆಗೆ ಹೆಚ್ಚಿನ ಸಮಯ ವ್ಯಯಿಸುವ ಅಗತ್ಯವಿರುವುದಿಲ್ಲ.

**02) ಕಲಿಕಾ ಚೇತರಿಕೆ ಸಂದರ್ಭದಲ್ಲಿ ಪಠ್ಯಪುಸ್ತಕಗಳನ್ನು ಹೇಗೆ ಬಳಸಿಕೊಳ್ಳಬೇಕು?**

ಕಲಿಕಾ ಹಾಳೆಗಳಲ್ಲಿ ಪಠ್ಯ ಪುಸ್ತಕಗಳನ್ನು ಬಳಸಿಕೊಳ್ಳುವ ಚಟುವಟಿಕೆಗಳನ್ನು ನೀಡಲಾಗಿದೆ. ಅಂತಹ ಸಂದರ್ಭಗಳಲ್ಲಿ ಪಠ್ಯ ಪುಸ್ತಕಗಳನ್ನು ಬಳಸಿಕೊಳ್ಳುವುದು. (ಈ ಬಗ್ಗೆ ಶಿಕ್ಷಕರ ಕೈಪಿಡಿಯಲ್ಲಿ ಉಲ್ಲೇಖಿಸಲಾಗಿದೆ) ಕಲಿಕಾ ಹಾಳೆಗಳನ್ನು ವೇಗವಾಗಿ ಪೂರೈಸಿದ ಮಕ್ಕಳು ಶಿಕ್ಷಕರ ಸಹಾಯದಿಂದ ಪಠ್ಯಪುಸ್ತಕಗಳನ್ನು ಕಲಿಕಾ ಸಂಪನ್ಮೂಲಗಳಾಗಿ ಬಳಸಿಕೊಂಡು ಮುಂದುವರೆಯುವುದು.

**03) ಕಲಿಕಾಹಾಳೆ ಮತ್ತು ಅಭ್ಯಾಸ ಹಾಳೆಗಳಿಗಿರುವ ವ್ಯತ್ಯಾಸವೇನು?**

ಕಲಿಕೆಗಾಗಿ, ಕಲಿಕಾ ಅಂತರಗಳನ್ನು ಪೂರೈಸಿಕೊಳ್ಳುವ ಸೇತುವೆಯಾಗಿ ಬಳಸುವ ಪರಿಕರಗಳನ್ನು ಕಲಿಕಾ ಹಾಳೆಗಳು ಎನ್ನುತ್ತೇವೆ. ಕಲಿತ್ತಿದ್ದನ್ನು ಪುನರ್ಬಲನ, ಪುನರ್ ಮನನ ಮತ್ತು ಪುನರಾವರ್ತನೆಗೆ ಬಳಸಿಕೊಳ್ಳುವ ಪರಿಕರಗಳನ್ನು ಅಭ್ಯಾಸ ಹಾಳೆಗಳು ಎನ್ನುತ್ತೇವೆ.

**04) ಎಲ್ಲಾ ಪೋಷಕರು ಮತ್ತು ಅಧಿಕಾರಿ ವರ್ಗದವರಿಗೆ ಕಲಿಕಾಚೇತರಿಕೆಯ ಮಾಹಿತಿಯನ್ನು ನೀಡಲಾಗಿದೆಯೇ?**

ಇಲಾಖೆಯ ಅಧಿಕಾರಿಗಳಿಗೆ, ಶಿಕ್ಷಕ ಸಂಘದ ಪದಾಧಿಕಾರಿಗಳಿಗೆ ರಾಜ್ಯಹಂತದಲ್ಲಿ ಕಲಿಕಾಚೇತರಿಕೆಯ ಬಗ್ಗೆ ಅರಿವು ಮೂಡಿಸಲು ಕಾರ್ಯಾಗಾರ ನಡೆಸಲಾಗಿದೆ. ಬಿ.ಆರ್.ಸಿ ,ಬಿ.ಆರ್.ಪಿ,ಸಿ.ಆರ್.ಪಿ ಹಾಗೂ ಇತರೆ ಉಸ್ತುವಾರಿ ಅಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್, ಟೆಲಿ ಕಾನ್ಫರೆನ್ಸ್ ಮುಖೇನ ಕಲಿಕಾಚೇತರಿಕೆಯ ಬಗ್ಗೆ ಅರಿವು ಮೂಡಿಸಲಾಗಿದೆ.

ಪೋಷಕರು, SDMC ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಪ್ರತ್ಯೇಕವಾಗಿ ಕಲಿಕಾಚೇತರಿಕೆ ಉಪಕ್ರಮದ ಮಾಹಿತಿಯುಳ್ಳ ಕರಪತ್ರಗಳನ್ನು ಸಿದ್ಧಪಡಿಸಿದ್ದು, ಶಾಲಾ ಪ್ರಾರಂಭೋತ್ಸವ ಸಂದರ್ಭದಲ್ಲಿ ಹಾಗೂ ಪೋಷಕರ ಸಭೆಗಳಲ್ಲಿ ಅರಿವು ಮೂಡಿಸಲಾಗಿದೆ. ಆಗಸ್ಟ 2022 ಮಾಹೆಯನ್ನು ಕಲಿಕಾ ಚೇತರಿಕೆ 'ಜಾಗೃತಿ ಮಾಸ' ವನ್ನಾಗಿ ಆಚರಿಸುವ ಮುಖೇನ ಉಪಕ್ರಮದ ಅರಿವು ಎಲ್ಲಾ ಭಾಗೀದಾರರಿಗೆ ದೊರೆಯುವಂತೆ ಕ್ರಮವಹಿಸಿದೆ.

**05) ಕಲಿಕಾ ಹಾಳೆಗಳಲ್ಲಿ ಕೊಟ್ಟಿರುವುದಕ್ಕಿಂತ ಹೆಚ್ಚಿನ ಚಟುವಟಿಕೆಗಳನ್ನು ಶಿಕ್ಷಕರು ಕೈಗೊಳ್ಳಬಹುದೇ?**

ಹೌದು. ಕಲಿಕಾಹಾಳೆಗಳಲ್ಲಿ ಶ್ರೇಣೀಕೃತ ಚಟುವಟಿಕೆಗಳನ್ನು ಅಳವಡಿಸಿದ್ದು, ಅವಶ್ಯಕತೆ ಕಂಡುಬಂದಲ್ಲಿ ಕಲಿಕಾಫಲಗಳಿಗೆ ಪೂರಕವಾಗಿ ಹೆಚ್ಚಿನ ಚಟುವಟಿಕೆಗಳನ್ನು ಶಿಕ್ಷಕರು ಕೈಗೊಳ್ಳಬಹುದು.

**06) ದ್ವಿತೀಯ ಹಾಗೂ ತೃತೀಯ ಬಾಷೆಗಳಿಗೆ ಕಲಿಕಾ ಹಾಳೆಗಳು ಸರಬರಾಜಾಗುತ್ತದೆಯೇ? ಇಲ್ಲವಾದಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಹೇಗೆ ಅನುಕೂಲಿಸಬೇಕು?**

ಭಾಷಾಕ್ಷೇತ್ರಗಳನ್ನಾಧರಿಸಿ (LSRW), ಶ್ರೇಣೀಕೃತ ಚಟುವಟಿಕೆಗಳನ್ನು ಆಯಾ ಭಾಷಾ ಕಲಿಕಾ ಹಾಳೆಗಳಲ್ಲಿ ಅಳವಡಿಸಲಾಗಿದೆ. ಮಕ್ಕಳ ಕಲಿಕಾ ಮಟ್ಟಕ್ಕನುಗುಣವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಾಷೆಗಳಿಗೆ ಇವುಗಳನ್ನು ಬಳಸಿಕೊಂಡು ಕಲಿಕೆಯನ್ನು ಅನುಕೂಲಿಸುವುದು ಸೂಕ್ತ.

**07) ರಂಧ್ರಸಹಿತ (Perforated) ನೀಡಲಾಗಿರುವ ಎಲ್ಲಾ ಕಲಿಕಾ ಹಾಳೆಗಳನ್ನು ಕೃತಿ ಸಂಪುಟದಲ್ಲಿ ದಾಖಲಿಸಬೇಕೇ?**

ಇಲ್ಲ. ಉತ್ತಮ ಭಾಗವಹಿಸುವಿಕೆ, ವಿದ್ಯಾರ್ಥಿ ಸಾಧನೆಯನ್ನು ಬಿಂಬಿಸುವ, ವಿದ್ಯಾರ್ಥಿಯ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ಕಲಿಕಾ ಹಾಳೆಗಳನ್ನು ಕೃತಿ ಸಂಪುಟದಲ್ಲಿರಿಸುವುದು. ಪೋಷಕರು ಹಾಗೂ ಶಾಲೆಗೆ ಭೇಟಿ ನೀಡುವ ಅಧಿಕಾರಿಗಳೊಂದಿಗೆ ಹಂಚಿಕೊಳ್ಳುವುದು.

**08) ಕಲಿಕಾ ಹಾಳೆಗಳಲ್ಲಿನ ಎಲ್ಲಾ ಚಟುವಟಿಕೆಗಳನ್ನು ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ನಿರ್ವಹಿಸಲು ಹೆಚ್ಚಿನ ಸಮಯದ ಅವಶ್ಯಕತೆ ಇದೆ. ಸಲಹೆ ನೀಡಿರಿ.**

ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ತರಗತಿಯಲ್ಲಿ ನಡೆಸುವ ಮೊದಲು ಚಟುವಟಿಕೆ ಸಂಬಂಧಿಸಿದ ಪೂರ್ವಸಿದ್ಧತಾ ಚಟುವಟಿಕೆಗಳನ್ನು ಗುಂಪುಚಟುವಟಿಕೆ ಮೂಲಕ ಮಾಡುವಂತೆ ಉತ್ತೇಜಿಸುವುದು. ಮನೆಯಲ್ಲಿ ನಿರ್ವಹಿಸಬಹುದಾದ ಚಟುವಟಿಕೆಗಳ ಕುರಿತು ಪೋಷಕರೊಂದಿಗೆ ಮಾತನಾಡಿ, ಮಕ್ಕಳ ಕಲಿಕೆಗೆ ಸಹಕರಿಸಲು ಪ್ರೋತ್ಸಾಹಿಸುವುದು.

ಭಾಗೀದಾರರೆಲ್ಲರ ಸಹಕಾರ ಪಡೆದು, ಉತ್ತಮ ಪೂರ್ವ ಸಿದ್ದತೆಯೊಂದಿಗೆ ಅನುಕೂಲಿಸುವ ಮೂಲಕ ಕಲಿಕಾ ಹಾಳೆಗಳಲ್ಲಿನ ಎಲ್ಲಾ ಚಟುವಟಿಕೆಗಳನ್ನು ಇರುವ ಸಮಯದಲ್ಲಿಯೇ ಅತ್ಯುತ್ತಮವಾಗಿ ನಿರ್ವಹಿಸಲು ಸಾಧ್ಯ.

**09) FA-1, FA-2 ಹಾಗೂ SA-1 ಗಳನ್ನು ನಡೆಸಿ SATS ನಲ್ಲಿ ದಾಖಲಿಸಬೇಕೇ?**

ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳ ಕಲಿಕೆಯ ದೃಢೀಕರಣಕ್ಕಾಗಿ ತರಗತಿ ಪ್ರಕ್ರಿಯೆಯ ಜೊತೆಯಲ್ಲಿಯೇ ಹೆಚ್ಚಿನ ಚಟುವಟಿಕೆಗಳನ್ನು ನಿರ್ವಹಿಸುವುದನ್ನು ಕಲಿಕಾ ಚೇತರಿಕೆ ಉಪಕ್ರಮ ಅಪೇಕ್ಷಿಸುವುದರಿಂದ FA-1, FA-2,FA3 ಹಾಗೂ FA 4 ಗಳ ಮೌಲ್ಯಾಂಕನವನ್ನು ನಡೆಸಿ ಶಾಲಾ ಹಂತದಲ್ಲಿ ದಾಖಲೆಗಳನ್ನು ನಿರ್ವಹಿಸುವುದು. SATS ನಲ್ಲಿ ದಾಖಲಿಸುವ ಅಗತ್ಯವಿಲ್ಲ. SA-1, SA-2 ಗಳನ್ನು ನಡೆಸಿ SATS ನಲ್ಲಿ ದಾಖಲಿಸಲು ತಿಳಿಸಿದೆ.

**10) ಮೌಲ್ಯಮಾಪನದ ಉದ್ದೇಶದ ಹಿನ್ನೆಲೆಯಲ್ಲಿ ಕಲಿಕಾ ಚೇತರಿಕೆಯ ಸಂದರ್ಭದಲ್ಲಿ ಯಾವ ದಾಖಲೆಗಳನ್ನು/ಆಧಾರಗಳನ್ನು ನಿರ್ವಹಿಸಬೇಕು?**

ಮಕ್ಕಳ ಕಲಿಕಾ ಪ್ರಗತಿಯನ್ನು ಬಿಂಬಿಸುವ ನೈದಾನಿಕ ಪರೀಕ್ಷೆಗಳ ಫಲಿತಗಳು, ಕಲಿಕಾ ಹಾಳೆಗಳಿಂದ ಕೂಡಿದ ವಿದ್ಯಾರ್ಥಿಯ ಕೃತಿಸಂಪುಟ ಮತ್ತು ಉಪಾಖ್ಯಾನ ಪುರಾವೆಗಳನ್ನು ಕಲಿಕಾ ಚೇತರಿಕೆಯ ಸಂದರ್ಭದಲ್ಲಿ ನಿರ್ವಹಿಸಬೇಕು.

11) **ಮೊದಲನೇ ಸಂಕಲನಾತ್ಮಕ ಪರೀಕ್ಷೆಯಲ್ಲಿ ಮಕ್ಕಳಿಗೆ 2 ರೀತಿಯ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಬೇಕೆ? ಅದು ಹೇಗೆ?**

ಹೌದು. 2 ರೀತಿಯ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಬೇಕು ಮೊದಲನೇ ಸಂಕಲನಾತ್ಮಕ ಪರೀಕ್ಷೆಯ ವೇಳೆಗೆ ಶೇಕಡಾ 50 ರಷ್ಟು ಕಲಿಕಾ ಫಲಗಳನ್ನು ನಿಗದಿಪಡಿಸಲಾಗಿದೆ. ಇವುಗಳಲ್ಲಿ (Single and Multi focus) ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಲೆವೆಲ್-1 ಹಾಗೂ ಲೆವೆಲ್-2 ಪ್ರಶ್ನೆಪತ್ರಿಕೆಗಳನ್ನು ತಯಾರಿಸಿ ಪರೀಕ್ಷೆ ನಡೆಸುವುದು. ಸಂಖ್ಯೆ: DSERT/EVG/ಮೌಲ್ಯಾಂಕನ 2022-23 ದಿನಾಂಕ:24.08.2022 ರ ಜ್ಞಾಪನಾವನ್ನು ಅವಲೋಕಿಸುವುದು.

12) **ಮೌಲ್ಯಾಂಕನ ಸ್ತರಗಳ ಬಗ್ಗೆ ತಿಳಿಸಿ.**

- ಒಂದು ಕಲಿಕಾ ಫಲಕ್ಕೆ ಶಿಕ್ಷಕರು ಅನುಕೂಲಿಸಿದ ನಂತರ ಮಗುವು ಕೋರ್ ವಿಷಯಗಳಲ್ಲಿ 4 ಹಂತದ ಕಲಿಕೆಯಲ್ಲಿ ಹಾಗೂ ಭಾಷಾ ವಿಷಯಗಳಲ್ಲಿ 3 ಹಂತದ ಕಲಿಕೆಯಲ್ಲಿ ತಾನು ಯಾವ ಹಂತದಲ್ಲಿರುವೆ ಎಂದು ಸ್ವ ನಿರ್ಧರಿಸಿಕೊಳ್ಳುವುದು.
- ಕಲಿಕಾ ಪ್ರಕ್ರಿಯೆಯಲ್ಲಿ ಮಗುವಿನ ಸ್ವಂತ ನಿರ್ಧಾರ ಬಹುಮುಖ್ಯವಾಗಿದ್ದು, ಮಗುವಿನ ನಿರ್ಧಾರಕ್ಕೆ ಅವಕಾಶ ಕಲ್ಪಿಸುವುದು.
- ವಿದ್ಯಾರ್ಥಿ ಸ್ವ ಮೌಲ್ಯಮಾಪನ ಆಧರಿಸಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಧನಾತ್ಮಕ ಹಿಮ್ಮಾಹಿತಿ ನೀಡಬಹುದಾಗಿದೆ.
- ವಿದ್ಯಾರ್ಥಿ ಸ್ವ - ಮೌಲ್ಯಮಾಪನ ಆಧರಿಸಿ ಶಿಕ್ಷಕರು ಸಹ ಅಗತ್ಯ ಹಿಮ್ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.

13) **ಕೃತಿ ಸಂಪುಟಕ್ಕೆ ಜೋಡಿಸಬೇಕಾದ ದಾಖಲೆಗಳು ಯಾವುವು?**

- ಮಗುವಿನ ಸ್ವ ವಿವರದ ಹಾಳೆ.
- ಅತ್ಯುತ್ತಮವಾಗಿ ಮಗುವು ನಿರ್ವಹಿಸಿದ ಕಲಿಕಾ ಹಾಳೆಯ ಚಟುವಟಿಕೆ ಪುಟಗಳು.
- ಪ್ರತ್ಯೇಕ ಪುಟಗಳಲ್ಲಿ ಉತ್ತಮವಾಗಿ ನಿರ್ವಹಿಸಿದ ದಾಖಲೆಗಳು.
- ಸಣ್ಣ ಸಣ್ಣ ಪ್ರಶ್ನೋತ್ತರ ಹಾಳೆಗಳು.
- ಮಗುವು ವಿಶೇಷವಾಗಿ ಸಾಧಿಸಿರುವ ದಾಖಲೆಗಳು
- ಮಕ್ಕಳು ಮಾಡಿರುವ ಸಮೀಕ್ಷೆಗಳು, ಕ್ಷೇತ್ರ ಭೇಟಿಯಿಂದ ಸಂಗ್ರಹಿಸಿರುವ ಮಾಹಿತಿ, ಯೋಜನೆಗಳು.

14) **ವೈಯಕ್ತಿಕ ಅಂಕ/ನಮೂದು ವಹಿ ನಿರ್ವಹಣೆ ಹೇಗೆ?**

a) ನಡೆಸಲಾದ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಶಗಳನ್ನು ಗುರುತಿಸಿಕೊಳ್ಳುವುದು.
b) ನಡೆಸಲಾದ ಎಲ್ಲಾ ಚಟುವಟಿಕೆಗಳನ್ನು ಪರಿಗಣಿಸಿ ಆಯಾ FA ಗೆ ಶೇಕಡಾ 15 ರಷ್ಟಕ್ಕೆ ಪರಿಗಣಿಸುವುದು.
c) ನಿರ್ವಹಿಸಿದ ಎಲ್ಲಾ ಮುಖ್ಯ ಚಟುವಟಿಕೆಗಳನ್ನು ದಾಖಲಿಸಿಕೊಳ್ಳುವುದು.
d) ಇದರಲ್ಲಿ
    - ಚಟುವಟಿಕೆ ಪ್ರಕ್ರಿಯೆ
    - ಮಕ್ಕಳ ಬರವಣಿಗೆ ಅಂಶಗಳು
    - Home Work
    - ಮಕ್ಕಳ ರಚಿತ ಪ್ರಶ್ನೆ-ಉತ್ತರಗಳು
    - ಸ್ವ-ಮೌಲ್ಯಮಾಪನ
    - Child Profile ದಾಖಲೆಗಳು ಸೇರಿರುತ್ತವೆ.

**15) ಪ್ರತಿ ಕಲಿಕಾ ಫಲದ ಅಂತ್ಯದಲ್ಲಿ ನನ್ನ ಕಲಿಕೆಯ ಅವಲೋಕನ (ಸ್ವಅವಲೋಕನ) ದಲ್ಲಿ ವಿದ್ಯಾರ್ಥಿ ಎಲ್ಲಾ ಸ್ತರಗಳನ್ನು ಸಾಧಿಸದಿದ್ದಲ್ಲಿ ಮುಂದಿನ ಕಲಿಕಾ ಫಲದ ಚಟುವಟಿಕೆಗಳಲ್ಲಿ ಮುಂದುವರಿಯಬಹುದೇ?**

ಪ್ರತಿ ಕಲಿಕಾ ಫಲದ ಗಳಿಕೆಯ ಕೊನೆಯಲ್ಲಿ ವಿದ್ಯಾರ್ಥಿಗೆ ಹಿಮ್ಮಾಹಿತಿ ಮೂಲಕ ವಿದ್ಯಾರ್ಥಿಗೆ ತನ್ನ ಗಳಿಕೆಯನ್ನು ಸೂಕ್ಷ್ಮವಾಗಿ ವಿವರಿಸಲಾಗುತ್ತದೆ. ನಂತರ ವಿದ್ಯಾರ್ಥಿ ಮುಂದಿನ ಕಲಿಕಾ ಫಲದ ಚಟುವಟಿಕೆಗಳನ್ನು ಪ್ರಾರಂಭಿಸುವುದು. ಆದರೂ ಹಿಂದಿನ ಕಲಿಕಾ ಫಲಗಳಲ್ಲಿ 100% ಗಳಿಕೆ ಆಗದಿದ್ದಲ್ಲಿ ವಿದ್ಯಾರ್ಥಿಗಳಿಗೆ ಮನೆಗೆಲಸ, ಪುನರ್ಬಲನ ಚಟುವಟಿಕೆ, ಅಭ್ಯಾಸ ಚಟುವಟಿಕೆಗಳ ಮೂಲಕ ಹಿಂದಿನ ಕಲಿಕಾ ಫಲಗಳ ಚಟುವಟಿಕೆಗಳನ್ನು ಸಾಧಿಸಲು ಕ್ರಮಕೈಗೊಳ್ಳಬಹುದು.

**16) 4 ನೇ ತರಗತಿ ಕನ್ನಡ ಅಭ್ಯಾಸ ಹಾಳೆಯ ಹೀಗೂ ಬರೆಯಬಹುದು ಚಟುವಟಿಕೆ ನಿರ್ವಹಣೆ ಹೇಗೆ?**

ಚಟುವಟಿಕೆಗೆ ಪೂರಕವಾಗಿ ಮತ್ತು ಬರೆದ ಟಿಪ್ಪಣಿಯಲ್ಲಿ ತಪ್ಪುಗಳಿದ್ದರೆ ಅದರ ಸರಿಯಾದ ರೂಪವನ್ನು ಅಲ್ಲಿಯೇ ತಿದ್ದದೇ ಹೀಗೂ ಬರೆಯಬಹುದು ಕಾಲಂನಲ್ಲಿ ಶಿಕ್ಷಕರು ಮಾದರಿಯಾಗಿ ಬರೆಯುವ ಮೂಲಕ ವಿದ್ಯಾರ್ಥಿಗಳನ್ನು ಉತ್ತಮ ಬರವಣಿಗೆಗೆ ಪ್ರೇರೇಪಿಸುವ ಚಟುವಟಿಕೆಯಾಗಿದೆ.

**17) ಕಲಿಕಾ ಚೇತರಿಕೆಯಲ್ಲಿ ಶಿಕ್ಷಕರ ಪೂರ್ವಸಿದ್ಧತೆ ಹೇಗಿರಬೇಕು?**

- ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಅನುಕೂಲಿಸುವ ವಿಧಾನ,ಅಗತ್ಯ ಸಾಧನ,ತಂತ್ರಗಳನ್ನು ಯೋಜಿಸುವುದು.
- ಕಲಿಕಾಫಲಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಸಿದ್ಧಪಡಿಸುವುದು.
- ತರಗತಿಯ ವಿದ್ಯಾರ್ಥಿಗಳನ್ನು ಕಲಿಕಾವೇಗಕ್ಕನುಗುಣವಾಗಿ ಗುಂಪುಗಳನ್ನಾಗಿ ರಚಿಸುವುದು

**18) ಕಲಿಕಾ ಚೇತರಿಕೆಯಲ್ಲಿ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳೇನು?**

- ಕಲಿಕಾ ಫಲಗಳ ಮಾಹೆವಾರು ಹಂಚಿಕೆಯನ್ವಯ ವಾರ್ಷಿಕ ಕ್ರಿಯಾಯೋಜನೆ,
- ಶಿಕ್ಷಕರ ದಿನಚರಿ ನಿರ್ವಹಣೆ
- ವಿದ್ಯಾರ್ಥಿ ಕೃತಿ ಸಂಪುಟ ನಿರ್ವಹಣೆ
- ವೈಯಕ್ತಿಕ ಅಂಕವಹಿ

**19) ಕಲಿಕಾ ಚೇತರಿಕೆಯಲ್ಲಿ ಸಿ.ಆರ್.ಪಿ ವೀಕ್ಷಿಸಬೇಕಾದ ಅಂಶಗಳೇನು?**

- ಕಲಿಕಾ ಹಾಳೆ ಆಧರಿಸಿದ ತರಗತಿ ಕಲಿಕಾ ಪ್ರಕ್ರಿಯೆಯ ವೀಕ್ಷಣೆ
- ವಿದ್ಯಾರ್ಥಿವಾರು, ವಿಷಯವಾರು ಕಲಿಕಾ ಫಲಗಳ ಸಾಧನೆ
- Multi focus group ವಿದ್ಯಾರ್ಥಿಗಳ ಕಲಿಕಾ ಪ್ರಗತಿಗೆ ಕೈಗೊಳ್ಳಲಾಗಿರುವ ಕ್ರಮಗಳು

**20) ಕಲಿಕಾ ಹಾಳೆಗಳ ಆಧಾರದ ಮೇಲೆ ಮೌಲ್ಯಾಂಕನ ಮಾಡುವುದು ಹೇಗೆ?**

ವಿದ್ಯಾರ್ಥಿಗಳು ನಿರ್ವಹಿಸಿರುವ ಚಟುವಟಿಕೆಗಳನ್ನು ಆಧರಿಸಿ ಹಾಗೂ ಹೆಚ್ಚುವರಿ ಚಟುವಟಿಕೆಗಳನ್ನು ನಿಯೋಜಿತ ಕಾರ್ಯದಂತೆ ನೀಡಿ ರೂಪಣಾತ್ಮಕ ಮೌಲ್ಯಂಕನ ಮಾಡಿಕೊಳ್ಳುವುದು. ದಿನಾಂಕ: 28/04/2022 ರ ಸುತ್ತೋಲೆಯ ಅಂಶಗಳನ್ನು ಅನುಸರಿಸುವುದು.